ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡ ಕಾಮಗಾರಿಗಳ ಪ್ರಗತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 121(510)

ಸದಸ್ಯರ ಹೆಸರು ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಬೆಂಗಳೂರಿನ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುತಕ್ಕ ದೊಡ್ಡ ನಾಲಾ ದುರಸ್ತಿ ಉದ್ಯಾನವನಗಳ ಅಭಿವೃದ್ಧಿ ಟಾಸ್ಕರ್ ಟೌನ್‌ನ ಆಟದ ಮೈದಾನವನ್ನು ಪುನರ್ ನಿರ್ಮಿಸುವುದು ಹಾಗೂ ಕನ್ನಿಂಗ್ ಹ್ಯಾಮ್ ರಸ್ತೆಯನ್ನು ಕಾರಿಡಾರ್ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಗಳನ್ನು ಬೆಂಗಳೂರು ಮಹಾನಗರ ಪಾಲಿಕ ಕೈಗೊಂಡಿದೆಯೆ?

ಆ) ಹಾಗಿದ್ದಲ್ಲಿ, ಇವುಗಳ ಕುರಿತು ಇತ್ತೀಚಿನ ಪ್ರಗತಿಯ ವಿವರ ನೀಡುವುದು?

ಇ) ಈ ಕಾಮಗಾರಿಗಳು ಯಾವಾಗ ಪೂರ್ಣಗೊಳ್ಳುವುದು?

ಉತ್ತರ

ಅ) ಬೆಂಗಳೂರಿನ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುತಕ್ಕ ದೊಡ್ಡ ನಾಲಾ ದುರಸ್ತಿಯನ್ನು ದೊಡ್ಡ ನಾಲಗಳ ಪುನರ್ ನಿರ್ಮಾಣ ಮತ್ತು ನವೀಕರಣ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ 2001-02ನೇ ಸಾಲಿನಲ್ಲಿ ವಾರ್ಡ್ 78ರಲ್ಲಿನ ಟಾಸ್ಕರ್ ಟೌನ್ ಉದ್ಯಾನವನ್ನು ಅಭಿವೃದ್ಧಿಗೊಳಿಸಲಾಗಿರುತ್ತದೆ ಉಳಿದಂತೆ, ಇತರೆ ಉದ್ಯಾನವನಗಳ ಅಭಿವೃದ್ಧಿ ಕಾರ್ಯವನ್ನು- 2002-03ನೇ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು ಟಾಸ್ಕರ್ ಟೌನ್ ಆಟದ ಮೈದಾನವನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಬೆಂಗಳೂರು ಮಹಾನಗರ ಪಾಲಿಕೆ ಕೈಗೊಂಡಿದೆ

ಕನ್ನಿಂಗ್‌ಹ್ಯಾಂ ರಸ್ತೆಯನ್ನು ಮೋಟಾರಬಲ್ ರಸ್ತೆಗಳನ್ನು ಅನಿವೃದ್ಧಿವಡಿಸುವ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿದೆ

ಆ) ದೊಡ್ಡ ನಾಲೆಗಳ ಪುನರ್ ನಿರ್ಮಾಣ ಮತ್ತು ನವೀಕರಣ ಯೋಜನೆಯಡಿಯಲ್ಲಿ ದೊಡ್ಡ ನಾಲೆಗಳ ಅಭಿವೃದ್ಧಿ ಕಾರ್ಯವನ್ನು ಮೆ ಸ್ಟೂಪ್ ಕನ್ಸಲ್ಟೆಂಟ್ಸ್, ಬೆಂಗಳೂರು, ರವರಿಗೆ ನೀಡಲು ಉದ್ದೇಶಿಸಲಾಗಿದೆ ಟಾಸ್ಕರ್ ಟೌನ್ ಆಟದ ಮೈದಾನವನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ ಟೆಂಡರ್ ಕರೆಯುವ ಕಾರ್ಯ

ಪ್ರಗತಿಯಲ್ಲಿದೆ .

ಕನ್ನಿಂಗ್ ಹ್ಯಾಂ ರಸ್ತೆಯ ಅಭಿವೃದ್ಧಿ ಬಗ್ಗೆ ಮಂಜೂರಾತಿ ಪಡೆದು ಗುತ್ತಿಗೆ ಕರೆಯಲಾಗುವುದು

ಇ) ದೊಡ್ಡ ನಾಲಾ ದುರಸ್ತಿ ಕಾರ್ಯವು ಡಿಸೆಂಬರ್ 2004ರಲ್ಲಿ ಪೂರ್ಣಗೊಳ್ಳುವುದು ಟಾನ್ಕರ್ ಟೌನ್ ಆಟದ ಮೈದಾನದ ಕಾಮಗಾರಿಯನ್ನು 2002-03ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು ಕನ್ನಿಂಗ್ ಹ್ಯಾಂ ರಸ್ತೆ ಕಾಮಗಾರಿಯನ್ನು ಡಿಸೆಂಬರ್ 2002ರಲ್ಲಿ ಪೂರ್ಣಗೊಳಿಸಲಾಗುವುದು

ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿರುವ ಮುಳಬಾಗಿಲು ಗೌರಿಬಿದನೂರು ವರ್ತುಲ ರಸ್ತೆ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 122(513)

ಸದಸ್ಯರ ಹೆಸರು ಶ್ರೀ ಚೌಡರೆಡ್ಡಿ(ಚಿಂತಾಮಣಿ)

ಉತ್ತರಿಸುವ ಸಚಿವರು ಶ್ರೀ ಎಂ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಪ್ರಶ್ನೆ

1) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿರುವ ಮುಳಬಾಗಿಲು ಗೌರಿಬಿದನೂರು ರಸ್ತೆ ನಗರ ಮಧ್ಯ ಭಾಗದಲ್ಲಿ ಹಾದು ಹೋಗುತ್ತಿದ್ದು ಈ ರಸ್ತೆಯಲ್ಲಿನ ಹೆಚ್ಚಿನ ವಾಹನ ಹಾಗೂ ಜನ ಸಂಚಾರ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ನಗರಾಭಿವೃದ್ಧಿ ಇಲಾಖೆಯಿಂದ ಈ ಸಂಬಂಧದಲ್ಲಿ ವರ್ತುಲಾಕಾರದ ರಸ್ತೆ ಮಾಡಲು ಮಂಜೂರಾತಿ ನೀಡಿರುವುದು ನಿಜವೇ?

3) ಹಾಗಿದ್ದಲ್ಲಿ ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಉತ್ತರ

1) ಇಲ್ಲ

2) ಇಂಥ ಪ್ರಸ್ತಾವನೆಗಳು ನಗರಾಭಿವೃದ್ಧಿ ಇಲಾಖೆಯಲ್ಲಿ ಇರುವುದಿಲ್ಲ